

# ಗಜಗರ್ಭಕ್ಕೆ ತಡೆ?

## ಹೆಚ್ಚುತ್ತಿರುವ ಆನೆಗೆ ಸಂತಾನ ನಿಯಂತ್ರಣ ಲಸಿಕೆ ಅನಿವಾರ್ಯವೇ?

■ **ಯತೀಶ್ ಕುಮಾರ್ ಜಿ.ಡಿ**

ಇರೋದಿಷ್ಟೇ ಕಾಡು. ಅಭಿವೃದ್ಧಿ ಯೋಜನೆಗಳಿಗೆ ಕಾಡು ನಿತ್ಯ ನಾಶವಾಗುತ್ತಲೇ ಇದೆ. ಅಳಿದುಳಿದಿರುವ ಕಾಡಿನಲ್ಲೇ ಕಾಡುಪ್ರಾಣಿಗಳು ವಾಸಿಸಬೇಕಾದ ಕೆಟ್ಟ ಪರಿಸ್ಥಿತಿಯಿದೆ. ಆನೆ, ಹುಲಿಯಂತಹ ದೊಡ್ಡ ಪ್ರಾಣಿ ಸೇರಿದಂತೆ ಸಣ್ಣ ಪ್ರಾಣಿಗಳು ಸಹ ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ವಲಸೆ ಹೋಗಲು ಬೇಕಾದ ಕಾರಿಡಾರ್‌ಗಳು ಸಹ ಕಡಿಮೆ. ಇಂತಹ ಸ್ಥಿತಿಯಲ್ಲಿ ಕಾಡಿನಂಚಿನಲ್ಲಿರುವ ತೋಟಕ್ಕೆ ಕಾಡುಪ್ರಾಣಿಗಳು ನುಗ್ಗಿದರೆ ರೈತರಿಗೂ ತೊಂದರೆ ಪ್ರಾಣಿಗಳಿಗೂ ತೊಂದರೆ. ಇದಕ್ಕೆ ಪರಿಹಾರವಿಲ್ಲವೇ?

ಕೇಂದ್ರವಿರಲಿ ಅಥವಾ ರಾಜ್ಯವಿರಲಿ ತನ್ನ ತನ್ನ ಬಜೆಟ್‌ನಲ್ಲಿ ಕಡಿಮೆ ಹಣವನ್ನು ಅರಣ್ಯ ಇಲಾಖೆಗೆ ನೀಡುತ್ತಿವೆ. ಇರುವ ಕಾಡಿನಲ್ಲೂ ಗಣಿಗಾರಿಕೆಗೆ, ಅಣೆಕಟ್ಟು ನಿರ್ಮಾಣ, ರಸ್ತೆ, ರೈಲ್ವೆ ಮಾರ್ಗ ನಿರ್ಮಾಣದಂತಹ ಅಭಿವೃದ್ಧಿ ಯೋಜನೆಗಳಿಗೆ ಅನುಮತಿ ನೀಡುತ್ತಲೇ ಇವೆ. ಕಾಡು ಹೆಚ್ಚಾಗುತ್ತಿಲ್ಲ. ನಿತ್ಯ ಅನಧಿಕೃತ ಒತ್ತುವರಿ ಹೆಚ್ಚಾಗುತ್ತಲೇ ಇದೆ. ಕಾಡೇ ಹೆಚ್ಚಾಗಿರುವ ಮಲೆನಾಡಿನಲ್ಲೂ ಒತ್ತುವರಿಯನ್ನು ಸಕ್ರಮ ಮಾಡುವ ಕೆಲಸವನ್ನು ಸರ್ಕಾರವೇ ಮಾಡುತ್ತಿದೆ. ಇದಕ್ಕೆ ಜನಪ್ರತಿನಿಧಿಗಳ ಆಶೀರ್ವಾದವೂ ಇದೆ ಎನ್ನುವುದು ನಗ್ನಸತ್ಯ.

ಗುಣಮಟ್ಟದ ಕಾಡೇ ಕಡಿಮೆಯಾಗುತ್ತಿರುವಾಗ ಕಾಡುಪ್ರಾಣಿಗಳ ಸಂತತಿ ನಿಯಂತ್ರಣವೊಂದೇ ಉಳಿದಿರುವ ದಾರಿ ಎನ್ನುವ ಅಭಿಪ್ರಾಯವಿದೆ. ರೈತರ ಹೊಲಕ್ಕೆ ನುಗ್ಗಿ ಬೆಳೆ ಹಾಳುಮಾಡುವ ಕಾಡುಹಂದಿಗಳನ್ನು ಉಪದ್ರವಕಾರಿ ಎಂದೇ ಅರಣ್ಯ ಇಲಾಖೆ ಪರಿಗಣಿಸಿ ಗುಂಡಿಟ್ಟು ಕೊಂದು ಮಣ್ಣು ಮಾಡಲು ಅನುಮತಿ ನೀಡಿದೆ. ಭಾರತೀಯ ಸಂಸ್ಕೃತಿಯಲ್ಲಿ ಆನೆಗೆ ದೈವದ ಸ್ವರೂಪ ನೀಡಿ ಗಣೇಶ ಎಂದು ಪೂಜಿಸಲಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ಊರು ಇಲ್ಲವೇ ತೋಟಕ್ಕೆ ನುಗ್ಗುವ ಆನೆಗೆ ಗುಂಡಿಟ್ಟು ಸಾಯಿಸುವ ಪರಿಕಲ್ಪನೆಗೆ ವಿರೋಧ ಬರುತ್ತದೆ. ಹೀಗಾಗಿಯೇ ಪುಂಡಾನೆಗಳಿಗೆ ಅರಿವಳಿಕೆ ನೀಡಿ ಆನೆ ಶಿಬಿರಕ್ಕೆ ಕಳುಹಿಸಿ ತರಬೇತಿ ನೀಡಿ ಸಾಕಾನೆಗಳನ್ನಾಗಿ ಮಾಡುತ್ತಿದ್ದಾರೆ.